BKN-22

Sl.No. :

Total No. of Pages : 3

ದ್ವಿತೀಯ ವರ್ಷದ ಬಿ.ಎ. ಪದವಿ ಪರೀಕ್ಷೆ, ಮೇ/ಜೂನ್ - 2026

(SLM Scheme)

ಐಚ್ಛಿಕ ಕನ್ನಡ (ಪತ್ರಿಕೆ–2)

ನಡುಗನ್ನಡ ಮತ್ತು ಹೊಸಗನ್ನಡ ಪದ್ಯಗಳು

(ಬಸವರಾಜದೇವರ ರಗಳೆ, ಹರಿಶ್ಚಂದ್ರ ಕಾವ್ಯ ಸಂಗ್ರಹ, ಕೆ.ಎಸ್.ನ ಅವರ ಆಯ್ದ ಕವನಗಳು ಮತ್ತು ಬೆರಳ್‌ಗೆ ಕೊರಳ್)

ಸಮಯ : 3 ಗಂಟೆಗಳು **ಗರಿಷ್ಠಾಂಕಗಳು : 80**

ಸೂಚನೆ : *ಎಲ್ಲಾ ಪ್ರಧಾನ ಪ್ರಶ್ನೆಗಳೂ ಕಡ್ಡಾಯ.*

ವಿಭಾಗ–ಎ

(ಬಸವರಾಜದೇವರ ರಗಳೆ, ಹರಿಶ್ಚಂದ್ರಕಾವ್ಯ ಸಂಗ್ರಹ : 20 ಅಂಕಗಳು) **[2×4=8]**

ಪ್ರ1) ಎರಡರ ಭಾವವನ್ನು ಸಂದರ್ಭ ಸಹಿತ ವಿವರಿಸಿ.

೧) ಸಂಗಯ್ಯ ಬಾಯೆಂದು ಕರೆವೆ ನೀನೆನ್ನುವಂ
ಪಿಂಗಲೀಯದು ಶರಣಗೋಷ್ಠಿ ಕೇಳೆನ್ನುವಂ।
ಶರಣರೊಕ್ಕುದಱ ಸವಿ ಕೈಲಾಸದೊಳಗುಂಟೆ
ಶರಣಸಂಗದ ಸುಖಂ ಕೈಲಾಸದೊಳಗುಂಟೆ।
ಇಲ್ಲಿಯ ಸುಖಂ ದೇವ ಅಲ್ಲಿಯುಳ್ಳುಡೆ ಲೇಸು
ಅಲ್ಲೆನ್ನೆ ಈಗಳೇ ಕೊಂಡು ಹೋಹುದು ಲೇಸು।

ಅಥವಾ

ಸಂಗ ನಾಮಂಗಳಂ ಪುರಜನಕೆ ಕಲಿಸುತಂ
ಸಂಗ ಶರಣೆಂದವರ ಪದತಳಕ್ಕೆರಗುತಂ
ನಡೆವಲ್ಲಿ ನುಡಿವಲ್ಲಿ ಸಂಗ ಶರಣೆಂದೆನುತೆ
ಉಡುವಲ್ಲಿ ಉಂಬಲ್ಲಿ ಸಂಗ ಶರಣೆಂದೆನುತೆ
ಕೊಡುವಲ್ಲಿ ಕೊಂಬಲ್ಲಿ ಸಂಗ ಶರಣೆಂದೆನುತೆ
ತೊಡುವಲ್ಲಿ ಪೊದೆವಲ್ಲಿ ಸಂಗ ಶರಣೆಂದೆನುತೆ.

೨) ಅಕ್ಕಕ್ಕು ಬಚ್ಚಲುದಕಂ ತಿಳಿದಡಾರ ಮೀ
ಹಕ್ಕೆ ಯೋಗ್ಯಂ ನಾಯ್ಗೆ ಹಾಲುಳ್ಳಡಾವನೂ
ಟಕ್ಕೆ ಯೋಗ್ಯಂ ಪ್ರೇತವನದೊಳಗೆ ಬೆಳೆದ ಹೂವಾರ ಮುಡಿಹಕ್ಕೆ ಯೋಗ್ಯಂ
ಮಿಕ್ಕ ಹೊಲತಿಯರು ನೀವೆನೆ ನಿಮ್ಮ ಜವ್ವನದ
ಸೊಕ್ಕು ರೂಪಿನ ಗಾಡಿ ಜಾಣತನದೊಪ್ಪವೇ
ತಕ್ಕೆ ಯೋಗ್ಯಂ ರಮಿಸಿದವರುಂಟೆ ಶಿವಶಿವೀ ಮಾತು ತಾ ಹೊಲೆಯೆಂದನು.

ಅಥವಾ

ಪುರದ ಪುಣ್ಯಂ ಪುರುಷರೂಪಿಂದೆ ಪೋಗುತಿದೆ
ಪರಿಜನದ ಭಾಗ್ಯವಡವಿಗೆ ನಡೆಯುತಿದೆ ಸಪ್ತ
ಶರಧಿಪರಿವೃತಧರೆಯ ಸಿರಿಯ ಸೊಬಗಜ್ಞಾತವಾಸಕ್ಕೆ ಪೋಗತಿದೆಕೋ
ಎರೆವ ದೀನಾನಾಥರಾನಂದವಡಗುತಿದೆ
ವರಮುನೀಂದ್ರರ ಯಾಗರಕ್ಷೆ ಬಲವಳಿಯುತಿದೆ
ನಿರುತವೆಂದೊಂದಾಗಿ ಬಂದು ಸಂದಿಸಿ ನಿಂದ ಮಂದಿ ನೊಜೆಮೊಜೆಯಿಟ್ಟುದು.

ಪ್ರ2) ಎಂಟು ಪದಗಳಿಗೆ ಅರ್ಥ ಬರೆಯಿರಿ. **[8×½=4]**

ವತ್ಸ, ಪಯ, ಹರಣ, ಮೇಲೋಗರ, ವಾಯ, ಅರ್ಕ, ಓಜೆ, ಹದುಳ, ಬಾದಣ, ಮುಟ್ಟಿಗೆ.

ಪ್ರ3) ಒಂದು ವಿಷಯವನ್ನು ಕುರಿತು ಟಿಪ್ಪಣಿ ಬರೆಯಿರಿ : **[1×4=4]**

೧) ಬಸವಣ್ಣನ ಪಾತ್ರ ಚಿತ್ರಣ

೨) ರಾಘವಾಂಕ

ಪ್ರ4) ಎರಡರ ಸಂದರ್ಭ ಸ್ವಾರಸ್ಯವನ್ನು ವಿವರಿಸಿ : **[2×2=4]**

೩) ಶರಣರ ಸಂಗದ ಸುಖಂ ಕೈಲಾಸದೊಳಗುಂಟೆ.

ಅಥವಾ

ಸರ್ವ ಭಂಡಾರವೆಲ್ಲಂ ನಿನಗೆ ಬಸವಣ್ಣ.

೪) ಬಂದ ಸುಕೃತಂ ತಿರುಗಿ ಹೋಯ್ತು.

ಅಥವಾ

ಸುರನದಿಯೊಳಗನರ್ಘ್ಯ ರತ್ನವುದಯಿಸುವಂತೆ.

ವಿಭಾಗ–ಬಿ

(ಬಸವರಾಜದೇವರ ರಗಳೆ, ಹರಿಶ್ಚಂದ್ರಕಾವ್ಯ ಸಂಗ್ರಹ : 30 ಅಂಕಗಳು)

ಪ್ರ5) ಒಂದು ಪ್ರಶ್ನೆಗೆ ಉತ್ತರಿಸಿ : **[1×10=10]**

೧) ಬಸವಣ್ಣನವರು ಶಿವನನ್ನು ಪೂಜಿಸಿದ ಪರಿಯನ್ನು ವಿವರಿಸಿ.

೨) 'ಬಸವರಾಜದೇವರ ರಗಳೆ'ಯಲ್ಲಿನ ಸಾಮಾಜಿಕ, ಸಾಂಸ್ಕೃತಿಕ ಸಂಗತಿಗಳನ್ನು ವಿವರಿಸಿ.

ಪ್ರ6) ಒಂದು ಪ್ರಶ್ನೆಗೆ ಉತ್ತರಿಸಿ. **[1×10=10]**

೧) ಚಂದ್ರಮತಿಯ ಪ್ರಲಾಪ ಶೋಕ ಮತ್ತು ಕರುಣರಸದ ಮಡುವಾಗಿ ಮೂಡಿಬಂದಿರುವ ಬಗೆಯನ್ನು ವಿವರಿಸಿ.

೨) 'ಹರಿಶ್ಚಂದ್ರ ಕಾವ್ಯ'ದ ವೈಶಿಷ್ಟ್ಯವನ್ನು ನಿರೂಪಿಸಿ.

ಪ್ರ7) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **[2×5=10]**

೧) ಬಿಜ್ಜಳ

ಅಥವಾ

ಬಸವರಾಜದೇವರ ರಗಳೆಯ ಕಥಾಸಾರ

೨) ಗಾಣರಾಣಿಯರು

ಅಥವಾ

ಸ್ಮಶಾನದಲ್ಲಿ ಹರಿಶ್ಚಂದ್ರ

ವಿಭಾಗ–ಸಿ

(ಕೆ.ಎಸ್.ನ ಅವರ ಆಯ್ದ ಕವನಗಳು, ಬೆರಳ್‌ಗೆ ಕೊರಳ್ : 30 ಅಂಕಗಳು)

ಪ್ರ8) ಒಂದು ಪ್ರಶ್ನೆಗೆ ಉತ್ತರಿಸಿ : **[1×10=10]**

೩) 'ಬಳೆಗಾರನ ಹಾಡು' ಆಪ್ತತೆಯ ಕಲಾತ್ಮಕ ಚಿತ್ರಣ' ಈ ಹೇಳಿಕೆಯನ್ನು ವಿಮರ್ಶಿಸಿ.

೪) ಮೃತ್ಯು ಪ್ರಜ್ಞೆ 'ತೆರೆದ ಬಾಗಿಲು ಕವಿತೆಯಲ್ಲಿ' ಹೇಗೆ ಚಿತ್ರಿತವಾಗಿದೆ? ವಿವರಿಸಿ.

ಪ್ರ9) ಒಂದು ವಿಷಯವನ್ನು ಕುರಿತು ಟಿಪ್ಪಣಿ ಬರೆಯಿರಿ : **[1×5=5]**

೧) 'ಗಡಿಯಾರದಂಗಡಿಯ ಮುಂದೆ' ಕವಿತೆಯ ಆಶಯ

೨) 'ರೈಲ್ವೆ ನಿಲ್ದಾಣದಲ್ಲಿ, ಕವಿತೆಯ ವಸ್ತು.

ಪ್ರ10)ಒಂದು ಪ್ರಶ್ನೆಗೆ ಉತ್ತರಿಸಿ : **[1×10=10]**

೧) ಏಕಲವ್ಯ ಪಾತ್ರದ ಸ್ವಾರಸ್ಯವನ್ನು ಕುರಿತು ಬರೆಯಿರಿ.

೨) 'ಬೆರಳ್‌ಗೆ ಕೊರಳ್' ನಾಟಕದಲ್ಲಿ ಪಡಿಮೂಡಿರುವ ದ್ರೋಣಾಚಾರ್ಯರ ತೊಳಲಾಟವನ್ನು ವಿವರಿಸಿ.

ಪ್ರ11)ಒಂದು ವಿಷಯವನ್ನು ಕುರಿತು ಟಿಪ್ಪಣಿ ಬರೆಯಿರಿ : **[1×5=5]**

೧) ಗುರುತತ್ವ ವಿಚಾರ

೨) ಅಶ್ವತ್ಥಾಮ

● ● ●